# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಹೊಸ ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳ ಮಂಜೂರಾತಿಗೆ ಪ್ರಸ್ತಾವನೆ ಸಲ್ಲಿಸಲು ಅನುಸರಿಸಬೇಕಾದ ಮಾರ್ಗಸೂಚಿಗಳು.

ಓದಲಾಗಿದೆ:- ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು, ಇವರ ಪತ್ರ ಸಂಖ್ಯೆ: ಹಿಂವಕಇ/ವನಿಶಾ-3/ಸಿ.ಆರ್-11/2017-18, ದಿನಾಂಕ:14.02.2018.

******

ಪ್ರಸ್ತಾವನೆ:-

ಮೇಲೆ ಓದಲಾದ ದಿನಾಂಕ:14.02.2018ರ ಆಯುಕ್ತರ ಪ್ರಸ್ತಾವನೆಯಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖಾ ವತಿಯಿಂದ ರಾಜ್ಯದಲ್ಲಿ ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ಒಟ್ಟು 2438 ವಿದ್ಯಾರ್ಥಿನಿಲಯಗಳು ಕಾರ್ಯನಿರ್ವಹಿಸುತ್ತಿದ್ದು, ರಾಜ್ಯದ ಅನೇಕ ಸ್ಥಳಗಳಲ್ಲಿ ಇಲಾಖಾ ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳನ್ನು ಹೊಸದಾಗಿ ಮಂಜೂರು ಮಾಡುವಂತೆ ಬೇಡಿಕೆಗಳು ಬರುತ್ತಿದ್ದು, ವಿದ್ಯಾರ್ಥಿನಿಲಯಗಳ ಮಂಜೂರಾತಿಗೆ ಇಲಾಖೆಯಿಂದ ಸಿದ್ಧಪಡಿಸಿದ ತಡೆಪಟ್ಟಿಯನ್ವಯ ಜಿಲ್ಲಾ ಹಂತದಲ್ಲಿ ಪ್ರಸ್ತಾವನೆಯನ್ನು ಪಡೆದು ಸರ್ಕಾರಕ್ಕೆ ಸಲ್ಲಿಸಲಾಗುತ್ತಿದ್ದು, ಹೊಸದಾಗಿ ಪ್ರಸ್ತಾಪಿತ ವಿದ್ಯಾರ್ಥಿನಿಲಯಗಳಿಗೆ ಸಂಬಂಧಪಟ್ಟಂತೆ ಸರ್ಕಾರದಿಂದ ಯಾವುದೇ ಮಾರ್ಗಸೂಚಿ/ಆದೇಶಗಳು ಇರುವುದಿಲ್ಲವಾದ್ದರಿಂದ ಮಾರ್ಗಸೂಚಿಗಳು/ತಡೆಪಟ್ಟಿ ಸಿದ್ಧಪಡಿಸಿ, ಸರ್ಕಾರದ ಮಾರ್ಗಸೂಚಿಗಳನ್ನು ಹೊರಡಿಸಲು ಕೋರಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖಾ ವತಿಯಿಂದ ಹೊಸದಾಗಿ ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳ ಮಂಜೂರಾತಿ ನೀಡುವ ಕುರಿತು ಮಾರ್ಗಸೂಚಿ/ತಡೆಪಟ್ಟಿ ಹೊರಡಿಸಲು ಸರ್ಕಾರವು ತೀರ್ಮಾನಿಸಿದ್ದು, ಈ ಕೆಳಕಂಡಂತೆ ಆದೇಶಿಸಿದೆ.

## ಸರ್ಕಾರದ ಆದೇಶ ಸಂಖ್ಯೆ: ಬಿಸಿಡಬ್ಲ್ಯೂ 522 ಬಿಎಂಎಸ್ 2018, ಬೆಂಗಳೂರು ದಿನಾಂಕ:03-07-2018

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖಾ ವತಿಯಿಂದ ಹೊಸ ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳ ಮಂಜೂರಾತಿಗೆ ಸಂಬಂಧಿಸಿದಂತೆ ಈ ಕೆಳಕಂಡಂತೆ ಮಾರ್ಗಸೂಚಿ/ತಡೆಪಟ್ಟಿ ಜಾರಿಗೊಳಿಸಿ ಆದೇಶಿಸಿದೆ.

## ಮಾರ್ಗಸೂಚಿಗಳು

1. ಜಿಲ್ಲಾ / ತಾಲ್ಲೂಕು ಕೇಂದ್ರಗಳಲ್ಲಿ ಇಲಾಖಾ ಸರ್ಕಾರಿ ಹಾಗೂ ಖಾಸಗಿ ಅನುದಾನಿತ ಮೆಟ್ರಿಕ್ ಪೂರ್ವ/ಮೆಟ್ರಿಕ್ ನಂತರದ ಬಾಲಕ/ಬಾಲಕಿಯರ ವಿದ್ಯಾರ್ಥಿನಿಲಯಗಳು ಇಲ್ಲದಿದ್ದಲ್ಲಿ, ಅಂತಹ ಸ್ಥಳದಲ್ಲಿ ಹೊಸ ಸರ್ಕಾರಿ ವಿದ್ಯಾರ್ಥಿನಿಲಯಗಳನ್ನು ಪ್ರಾರಂಭಿಸಲು ಪ್ರಥಮ ಆದ್ಯತೆ ನೀಡತಕ್ಕದ್ದು.
2. ಹೊಸ ವಿದ್ಯಾರ್ಥಿನಿಲಯವನ್ನು ಪ್ರಸ್ತಾಪಿಸುವ ಸ್ಥಳದಲ್ಲಿ ಹೆಚ್ಚು ವಿದ್ಯಾಸಂಸ್ಥೆಗಳು ಇದ್ದು, ಇಲಾಖಾ ವಿದ್ಯಾರ್ಥಿನಿಲಯಗಳು ಇಲ್ಲದಿದ್ದಲ್ಲಿ, ಅಂತಹ ಸ್ಥಳಗಳಲ್ಲಿ ವಿದ್ಯಾರ್ಥಿನಿಲಯ ಪ್ರಾರಂಭಿಸಲು ಎರಡನೇ ಆದ್ಯತೆ ನೀಡತಕ್ಕದ್ದು
3. ವಿದ್ಯಾಸಿರಿ ಯೋಜನೆಯ ಸೌಲಭ್ಯ ಪಡೆಯಲು ಅತಿ ಹೆಚ್ಚು ಅರ್ಜಿ ಸ್ವೀಕೃತವಾಗುವ ಸ್ಥಳಗಳಲ್ಲಿ ಮೆಟ್ರಿಕ್-ನಂತರದ ವಿದ್ಯಾರ್ಥಿನಿಲಯಗಳನ್ನು ಪ್ರಾರಂಭಿಸಲು ನಂತರದ ಆದ್ಯತೆ ನೀಡತಕ್ಕದ್ದು. (ಪ್ರಸಕ್ತ ವರ್ಷ ಹಾಗೂ ಹಿಂದಿನ ವರ್ಷದಲ್ಲಿ ವಿದ್ಯಾಸಿರಿ ಸೌಲಭ್ಯ ಮಂಜೂರಾಗಿರುವ ವಿದ್ಯಾರ್ಥಿಗಳ ಸಂಖ್ಯೆಯನ್ನು ನಮೂದಿಸುವುದು.)

..2

4. ಜಿಲ್ಲೆಯಲ್ಲಿ ಸತತ ಮೂರು ವರ್ಷಗಳಲ್ಲಿ ಪ್ರವೇಶಾತಿ ಕಡಿಮೆ ಇರುವ ಯಾವುದಾದರೂ ವಿದ್ಯಾರ್ಥಿನಿಲಯಗಳಿದ್ದಲ್ಲಿ, ಸದರಿ ವಿದ್ಯಾರ್ಥಿನಿಲಯವನ್ನು ಸ್ಥಳಾಂತರ ಮಾಡುವ / ಉನ್ನತೀಕರಿಸುವ ಸಾಧ್ಯತೆಗಳ ಬಗ್ಗೆ ಪರಿಶೀಲಿಸುವುದು. ಸ್ಥಳಾಂತರ ಮಾಡಲು/ಉನ್ನತೀಕರಿಸಲು ಸಾಧ್ಯವಾಗದಿದ್ದಲ್ಲಿ ಮಾತ್ರ ಹೊಸ ವಿದ್ಯಾರ್ಥಿನಿಲಯ ಪ್ರಾರಂಭಕ್ಕೆ ಪ್ರಸ್ತಾವನೆ ಸಲ್ಲಿಸತಕ್ಕದ್ದು.

5. ಜಿಲ್ಲಾ/ತಾಲ್ಲೂಕು ಹಿಂದುಳಿದ ವರ್ಗಗಳ ಅಧಿಕಾರಿಗಳು ಮೇಲಿನ ಅಂಶಗಳನ್ನು ಪರಿಶೀಲಿಸಿ, ವಿದ್ಯಾರ್ಥಿನಿಲಯದ ಅವಶ್ಯಕತೆ ಬಗ್ಗೆ ಸ್ಥಳ ಪರಿಶೀಲನೆ/ಮಹಜರ್ ನಡೆಸಿ, ವಿದ್ಯಾರ್ಥಿನಿಲಯದ ಅವಶ್ಯಕತೆಯಿದ್ದಲ್ಲಿ ಮಾತ್ರ ಹೊಸ ವಿದ್ಯಾರ್ಥಿನಿಲಯದ ಮಂಜೂರಾತಿಗೆ ಪ್ರಸ್ತಾವನೆ ಸಲ್ಲಿಸತಕ್ಕದ್ದು. (ಸ್ಥಳ ಪರಿಶೀಲನೆ / ಮಹಜರ್ ಸಮಯದಲ್ಲಿ ತೆಗೆದ ಛಾಯಚಿತ್ರವನ್ನು ಪ್ರಸ್ತಾವನೆಯೊಂದಿಗೆ ಸಲ್ಲಿಸುವುದು.)

6. ವಿದ್ಯಾರ್ಥಿನಿಲಯಕ್ಕೆ ಪ್ರಸ್ತಾಪಿಸುವ ಸ್ಥಳವು ಜಿಲ್ಲಾ ಹಾಗೂ ತಾಲ್ಲೂಕು ಕೇಂದ್ರದಿಂದ 10 ಕಿ.ಮೀ. ಅಂತರದಲ್ಲಿರುವ ಬಗ್ಗೆ ಖಚಿತಪಡಿಸಿಕೊಳ್ಳತಕ್ಕದ್ದು.

7. 5 ಕಿ.ಮೀ. ಗಿಂತ ಹೆಚ್ಚಿನ ದೂರದ ಊರುಗಳಿಂದ ಶಾಲಾ / ಕಾಲೇಜುಗಳಿಗೆ ಬರುವ ಪ್ರವರ್ಗವಾರು (ಶೇ.75ರಷ್ಟು ವಿದ್ಯಾರ್ಥಿಗಳು ಹಿಂದುಳಿದ ವರ್ಗಗಳಿಗೆ ಸೇರಿದವರಾಗಿರಬೇಕು) ವಿದ್ಯಾರ್ಥಿಗಳ ಸಂಖ್ಯೆಯನ್ನು ಗಮನದಲ್ಲಿಟ್ಟುಕೊಂಡು, 50 ಸಂಖ್ಯಾಬಲದ / 100 ಸಂಖ್ಯಾಬಲದ ಮೆಟ್ರಿಕ್ ಪೂರ್ವ/ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯದ ಮಂಜೂರಾತಿಗೆ ಪ್ರಸ್ತಾಪಿಸತಕ್ಕದ್ದು.

8. ಹೊಸದಾಗಿ ಹಿಂದುಳಿದ ವರ್ಗಗಳ ವಿದ್ಯಾರ್ಥಿ ವಸತಿ ನಿಲಯಗಳನ್ನು ಮಂಜೂರು ಮಾಡುವಾಗ ಜಿಲ್ಲೆ/ತಾಲ್ಲೂಕುಗಳ ಆಯ್ಕೆಗೆ ಹೆಚ್ಚು ವಿದ್ಯಾಸಂಸ್ಥೆಗಳನ್ನು ಹಾಗೂ ಹಿಂದುಳಿದ ವರ್ಗದ ವಿದ್ಯಾರ್ಥಿಗಳ ಜನಸಂಖ್ಯೆಯನ್ನು ಹೊಂದಿರುವ ದೊಡ್ಡ ಜಿಲ್ಲೆ/ತಾಲ್ಲೂಕುಗಳನ್ನು ಪರಿಗಣಿಸುವುದು. ಉದಾ:-ಬೆಂಗಳೂರು, ಮೈಸೂರು, ಹಾಸನ, ತುಮಕೂರು, ಶಿವಮೊಗ್ಗ, ದಾವಣಗೆರೆ ದಕ್ಷಿಣ ಕನ್ನಡ, ಧಾರವಾಡ, ಬೆಳಗಾವಿ ಇತ್ಯಾದಿ ಅಲ್ಲದೇ ಡಾ||ಡಿ.ಎಂ.ನಂಜುಂಡಪ್ಪ ವರದಿಯನ್ವಯ ವಿದ್ಯಾರ್ಥಿವಸತಿ ನಿಲಯಗಳ ಅವಶ್ಯಕತೆಯಿರುವ ಹಿಂದುಳಿದ ಜಿಲ್ಲೆ ಹಾಗೂ ತಾಲ್ಲೂಕುಗಳಿಗೆ ಆದ್ಯತೆ ನೀಡುವುದು.

9. ಹೊಸದಾಗಿ ಹಿಂದುಳಿದ ವರ್ಗಗಳ ವಿದ್ಯಾರ್ಥಿ ವಸತಿ ನಿಲಯಗಳನ್ನು ಮಂಜೂರು ಮಾಡುವಾಗ ಹಿಂದುಳಿದ ವರ್ಗದ ವಿದ್ಯಾರ್ಥಿಗಳ ಜನಸಂಖ್ಯೆಯನ್ನೇ ಮಾನದಂಡವಾಗಿ ಪರಿಗಣಿಸುವುದು.

10. ಹೊಸದಾಗಿ ಹಿಂದುಳಿದ ವರ್ಗಗಳ ವಿದ್ಯಾರ್ಥಿವಸತಿ ನಿಲಯಗಳನ್ನು ಮಂಜೂರು ಮಾಡಲು ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳು ಪ್ರಸ್ತಾವನೆಯನ್ನು ಜಿಲ್ಲಾ ಪಂಚಾಯತ್ತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಜಿಲ್ಲಾ ಪಂಚಾಯತ್ತ್ ಉಪ ಕಾರ್ಯದರ್ಶಿ(ಅಭಿವೃದ್ಧಿ) ಹಾಗೂ ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳನ್ನೊಳಗೊಂಡ ತ್ರಿಸದಸ್ಯ ಸಮಿತಿ ಮೇಲ್ಕಂಡ ಮಾರ್ಗಸೂಚಿಗಳಿಗನುಸಾರವಾಗಿ ಪರಿಶೀಲಿಸಿ, ವರದಿ ನೀಡತಕ್ಕದ್ದು. ಸದರಿ ವರದಿಗನುಸಾರವಾಗಿ ವಿದ್ಯಾರ್ಥಿ ವಸತಿ ನಿಲಯ ಮಂಜೂರಾತಿಯನ್ನು ಸರ್ಕಾರದ ಹಂತದಲ್ಲಿ ಪರಿಶೀಲಿಸುವುದು.

11. ಖಾಸಗಿ ಸಂಸ್ಥೆಗಳು ನಡೆಸುವ ಹಿಂದುಳಿದ ವರ್ಗದ ವಿದ್ಯಾರ್ಥಿ ವಸತಿನಿಲಯಗಳಿಗೆ ಮಂಜೂರಾತಿ ನೀಡುವಾಗಲು ಸಹ ಈ ಮಾನದಂಡಗಳನ್ನು ಅನುಸರಿಸತಕ್ಕದ್ದು.

12. ಸರ್ಕಾರಿ/ಖಾಸಗಿ ವಿದ್ಯಾರ್ಥಿ ವಸತಿ ನಿಲಯಗಳಲ್ಲಿ ವಿದ್ಯಾರ್ಥಿಗಳ ದಾಖಲಾತಿ ಮಾಡುವ ಸಂದರ್ಭದಲ್ಲಿ ತಪ್ಪದೇ ವಿದ್ಯಾರ್ಥಿಗಳ/ಪೋಷಕರ ಆಧಾರ್ ಕಾರ್ಡ ಸೀಡ್ ಮಾಡತಕ್ಕದ್ದು.

13. ಸರ್ಕಾರಿ ಮೆಟ್ರಿಕ್-ಪೂರ್ವ / ಮೆಟ್ರಿಕ್-ನಂತರದ ವಿದ್ಯಾರ್ಥಿನಿಲಯಗಳನ್ನು ಪ್ರಾರಂಭಿಸಲು ತಪಾಸಣಾ ವರದಿಯನ್ನು ಅನುಬಂಧ-1 ಮತ್ತು ಅನುಬಂಧ-2 ರಲ್ಲಿನ ನಮೂನೆಗಳಲ್ಲಿ ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣ ಅಧಿಕಾರಿಗಳು ಸಿದ್ಧಪಡಿಸಿ, ಪ್ರಸ್ತಾವನೆಯನ್ನು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್ ರವರ ಅಭಿಪ್ರಾಯದೊಂದಿಗೆ ಸಲ್ಲಿಸುವುದು. ಮೇಲಿನ ಮಾರ್ಗಸೂಚಿಯನ್ವಯ ಹಿಂದುಳಿದ ವರ್ಗದ ವಿದ್ಯಾರ್ಥಿ ವಸತಿ ನಿಲಯಗಳಿಗೆ ಮಂಜೂರಾತಿ ನೀಡುವಾಗ ಸರ್ಕಾರದ ಹಂತದಲ್ಲಿ ಸೂಕ್ತವಾಗಿ ಪರಿಷ್ಕರಿಸುವುದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ:ಆಇ 218 ವೆಚ್ಚ-3/18, ದಿನಾಂಕ:05.06.2018ರ ಸಹಮತಿಯೊಂದಿಗೆ ಹೊರಡಿಸಲಾಗಿದೆ. ನಿಗಧಿತ ನಮೂನೆಯ ಅನುಬಂಧಗಳನ್ನು ಇದರೊಂದಿಗೆ ಲಗತ್ತಿಸಿದೆ.

ಕರ್ನಾಟಕದ ರಾಜ್ಯಪಾಲರ ಆದೇಶಾನುಸಾರ,
ಮತ್ತು ಅವರ ಹೆಸರಿನಲ್ಲಿ

(ಆರ್.ಭಾಸ್ಕರ್)
ಸರ್ಕಾರದ ಅಧೀನ ಕಾರ್ಯದರ್ಶಿ-2
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ.

ಇವರಿಗೆ:-

1. ಪ್ರಧಾನ ಮಹಾಲೇಖಪಾಲರು, (ಎ ಮತ್ತು ಇ) (ಲೆಕ್ಕ ಪರಿಶೋಧನೆ-1) (ಲೆಕ್ಕಪರಿಶೋಧನೆ-2), ಬೆಂಗಳೂರು.
2. ~~ಆಯುಕ್ತರು, ಹಿಂದುಳಿದ~~ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು.
3. ಖಜಾನಾಧಿಕಾರಿಗಳು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
4. ಎಲ್ಲಾ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್.
5. ಎಲ್ಲಾ ಜಿಲ್ಲಾ ಅಧಿಕಾರಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ.
6. ಎಲ್ಲಾ ಜಿಲ್ಲಾ ಖಜಾನಾಧಿಕಾರಿಗಳು.

ಆಯುಕ್ತರು, ಹಿಂವಕ, ಇವರ ಮುಖಾಂತರ

ಪ್ರತಿ ಮಾಹಿತಿಗಾಗಿ:

1. ಮಾನ್ಯ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
2. ಸರ್ಕಾರದ ಕಾರ್ಯದರ್ಶಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಇವರ ಆಪ್ತ ಕಾರ್ಯದರ್ಶಿಗಳು, ವಿಕಾಸ ಸೌಧ.
3. ಸರ್ಕಾರದ ಉಪ ಕಾರ್ಯದರ್ಶಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಇವರ ಆಪ್ತ ಸಹಾಯಕರು, ವಿಕಾಸ ಸೌಧ.
4. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮೂಲಕ ಹೊಸ ಮೆಟ್ರಿಕ್-ಪೂರ್ವ ವಿದ್ಯಾರ್ಥಿನಿಲಯವನ್ನು ಪ್ರಾರಂಭಿಸಲು

ತಪಾಸಣಾ ವರದಿಯ ನಮೂನೆ

ಅನುಬಂಧ-1 (ಭಾಗ-1)

<table>
<tr><td>1</td><td>ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳ ಹೆಸರು ಮತ್ತು ತಪಾಸಣಾ ದಿನಾಂಕ</td><td colspan="8"></td></tr>
<tr><td>2</td><td>ವಿದ್ಯಾರ್ಥಿನಿಲಯವನ್ನು ಪ್ರಾರಂಭಿಸಬೇಕಾದ ಸ್ಥಳದ ಹೆಸರು, ಜನಸಂಖ್ಯೆ ಮತ್ತು ತಾಲ್ಲೂಕು</td><td colspan="8"></td></tr>
<tr><td>3</td><td>ಪ್ರಾರಂಭಿಸಬೇಕಾದ ವಿದ್ಯಾರ್ಥಿನಿಲಯ ಬಾಲಕರಿಗಾಗಿಯೇ ಅಥವಾ ಬಾಲಕಿಯರಿಗಾಗಿಯೇ?</td><td colspan="8"></td></tr>
<tr><td rowspan="4">4</td><td>ನಿಲಯವನ್ನು ಪ್ರಾರಂಭಿಸಬೇಕಾದ ಸ್ಥಳದಲ್ಲಿ ನಡೆಯುತ್ತಿರುವ ಮೆಟ್ರಿಕ್-ಪೂರ್ವ ಶಿಕ್ಷಣ ಸಂಸ್ಥೆಗಳ ಸಂಖ್ಯೆ (ಅನುಬಂಧ-2(1) ರಲ್ಲಿ ಇರುವಂತೆ)</td><td colspan="2">ಸಂಸ್ಥೆಗಳ ಸಂಖ್ಯೆ</td><td colspan="2">ಬಾಲಕರು</td><td colspan="2">ಬಾಲಕಿಯರು</td><td colspan="2">ಒಟ್ಟು</td></tr>
<tr><td>ಅ) ಮಾಧ್ಯಮಿಕ (ಹಿರಿಯ ಪ್ರಾಥಮಿಕ)</td><td colspan="2"></td><td colspan="2"></td><td colspan="2"></td><td colspan="2"></td></tr>
<tr><td>ಆ) ಪ್ರೌಢಶಾಲೆಗಳು</td><td colspan="2"></td><td colspan="2"></td><td colspan="2"></td><td colspan="2"></td></tr>
<tr><td>ಇ) ಸಂಯುಕ್ತ ಕಿರಿಯ ಕಾಲೇಜುಗಳು</td><td colspan="2"></td><td colspan="2"></td><td colspan="2"></td><td colspan="2"></td></tr>
<tr><td>5</td><td>ಪ್ರಸ್ತಾಪಿತ ವಿದ್ಯಾರ್ಥಿನಿಲಯವು ತಾಲ್ಲೂಕು ಕೇಂದ್ರದಿಂದ ಎಷ್ಟು ದೂರದಲ್ಲಿದೆ?</td><td colspan="8"></td></tr>
<tr><td>6</td><td>10 ಕಿ.ಮೀ ಅಂತರದಲ್ಲಿ ಈ ಗ್ರಾಮದ ಸುತ್ತ ಮುತ್ತ ಯಾವುದೇ ಇಲಾಖೆಯ ಸರ್ಕಾರಿ / ಖಾಸಗಿ / ಅನುದಾನಿತ ವಿದ್ಯಾರ್ಥಿನಿಲಯಗಳು ನಡೆಯುತ್ತಿವೆಯೇ?</td><td colspan="8"></td></tr>
<tr><td>7</td><td>ನಡೆಯುತ್ತಿದ್ದಲ್ಲಿ, ಇಲಾಖೆಯ ಹೆಸರು, ಸಂಸ್ಥೆಯ ಹೆಸರು ಮತ್ತು ಮಂಜೂರಾತಿ ಸಂಖ್ಯೆ</td><td colspan="8"></td></tr>
<tr><td>8</td><td>5 ಕಿ.ಮೀ ಗಿಂತ ಹೆಚ್ಚಿನ ದೂರದ ಊರುಗಳಿಂದ ಬರುವ ವಿದ್ಯಾರ್ಥಿಗಳ ಒಟ್ಟು ಸಂಖ್ಯೆ (ಅನುಬಂಧ-2(2)(3)ರಲ್ಲಿ ಇರುವಂತೆ)</td><td>ಪ್ರ-1</td><td>2ಎ</td><td>2ಬಿ</td><td>3ಎ</td><td>3ಬಿ</td><td>ಎಸ್.ಸಿ</td><td>ಎಸ್.ಟಿ</td><td>ಒಟ್ಟು</td></tr>
<tr><td></td><td>ಬಾಲಕರು</td><td></td><td></td><td></td><td></td><td></td><td></td><td></td><td></td></tr>
<tr><td></td><td>ಬಾಲಕಿಯರು</td><td></td><td></td><td></td><td></td><td></td><td></td><td></td><td></td></tr>
</table>

..5

| | | |
|---|---|---|
| 9 | 50 ಸಂಖ್ಯಾಬಲದ ವಿದ್ಯಾರ್ಥಿನಿಲಯವನ್ನು ಪ್ರಾರಂಭಿಸಲು ಅನುಕೂಲಕರವಾದ ಉಚಿತ /ಬಾಡಿಗೆ ಕಟ್ಟಡ ದೊರೆಯುತ್ತದೆಯೇ? | |
| 10 | ವಿದ್ಯಾರ್ಥಿನಿಲಯದ ಪ್ರಾರಂಭಕ್ಕೆ ಮಂಜೂರಾತಿ ನೀಡಿದ್ದಲ್ಲಿ, ನಿಲಯದ ಕಟ್ಟಡ ನಿರ್ಮಾಣಕ್ಕೆ ಉಚಿತ ನಿವೇಶನ ಲಭ್ಯವಿದೆಯೇ? | |
| 11 | ಲಭ್ಯವಿದ್ದಲ್ಲಿ, ನಿವೇಶನದ ವಿವರಗಳನ್ನು ನೀಡುವುದು (ಸರ್ವೆ ನಂ, ನಿವೇಶನದ ಅಳತೆ ಅಡಿಗಳು) | |
| 12 | ವಿದ್ಯಾರ್ಥಿನಿಲಯದ ಪ್ರಾರಂಭಕ್ಕೆ ಸಂಬಂಧಿಸಿದ ಇತರೆ ಅಂಶಗಳೇನಾದರೂ ಇದ್ದಲ್ಲಿ, ವಿವರಣೆಗಳು | |
| 13 | ಸದರಿ ಸ್ಥಳದಲ್ಲಿ ವಿದ್ಯಾರ್ಥಿನಿಲಯದ ಪ್ರಾರಂಭಕ್ಕೆ ತನಿಖಾಧಿಕಾರಿಯ ಅಭಿಪ್ರಾಯ | |
| 14 | ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳ ಪರಿಶೀಲನೆಯಲ್ಲಿ ಕಂಡುಬಂದ ಅಂಶಗಳು | |
| 15 | ಮಂಜೂರಾತಿಯ ಬಗ್ಗೆ ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳ ಸ್ಪಷ್ಟ ಅಭಿಪ್ರಾಯ | |

ಸಹಿ:-

ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳು

----------------------------ಜಿಲ್ಲೆ.

## ಭಾಗ-2

| | | |
|---|---|---|
| 16 | ಪ್ರಸ್ತಾವನೆ ಕುರಿತು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಯ ಅಭಿಪ್ರಾಯ | |

ಸಹಿ:-

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು

ಜಿಲ್ಲಾ ಪಂಚಾಯತ್,

---------------------ಜಿಲ್ಲೆ.

## ಅನುಬಂಧ-2 (1)

ವಿದ್ಯಾರ್ಥಿನಿಲಯವನ್ನು ಪ್ರಾರಂಭಿಸಲು ಪ್ರಸ್ತಾಪಿಸಿರುವ ಸ್ಥಳದಲ್ಲಿರುವ ಶಿಕ್ಷಣ ಸಂಸ್ಥೆಗಳ ಹೆಸರು ಮತ್ತು ವಿದ್ಯಾರ್ಥಿಗಳ ಸಂಖ್ಯಾಬಲ

| ಕ್ರ. ಸಂ. | ಶಿಕ್ಷಣ ಸಂಸ್ಥೆಯ ಹೆಸರು | ಶಿಕ್ಷಣ ಸಂಸ್ಥೆಯಲ್ಲಿ ವ್ಯಾಸಂಗ ಮಾಡುವ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳ ಸಂಖ್ಯೆ | | |
|---|---|---|---|---|
| | | ಬಾಲಕರು | ಬಾಲಕಿಯರು | ಒಟ್ಟು |
| | | | | |

## ಅನುಬಂಧ-2(2)

ಅನುಬಂಧ-2(1)ರ ಕಾಲಂ 3 ಮತ್ತು 4ರ ಪೈಕಿ ಶಿಕ್ಷಣ ಸಂಸ್ಥೆಗಳಿಗೆ 5 ಕಿ.ಮೀ ದೂರದ ಊರುಗಳಿಂದ ಬರುವ ವಿದ್ಯಾರ್ಥಿಗಳ ವಿವರಗಳನ್ನು ಈ ನಮೂನೆಯಲ್ಲಿ ಒದಗಿಸುವುದು (ಶಿಕ್ಷಣ ಸಂಸ್ಥೆವಾರು ಪ್ರತ್ಯೇಕವಾಗಿ)

| ಕ್ರ. ಸಂ. | ವಿದ್ಯಾರ್ಥಿ ಹೆಸರು | ಖಾಯಂ ವಾಸ ಸ್ಥಳ | ಪೋಷಕರು | ವಾಸ ಸ್ಥಳಕ್ಕೂ ಮತ್ತು ವಿದ್ಯಾಸಂಸ್ಥೆಗೂ ಇರುವ ದೂರ | ಜಾತಿ | ಹಿಂದುಳಿದ / ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ | ತರಗತಿ | ಕುಟುಂಬದ ವಾರ್ಷಿಕ ಆದಾಯ |
|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 |
| | | | | | | | | |

## ಅನುಬಂಧ-2(3)

ಅನುಬಂಧ-2(2) ರಲ್ಲಿರುವ ವಿದ್ಯಾರ್ಥಿಗಳ ವಿವರಗಳು

| ಕ್ರ. ಸಂ | ಶಿಕ್ಷಣ ಸಂಸ್ಥೆಯ ಹೆಸರು | ಬಾಲಕರ ಪ್ರವರ್ಗ | | | | | | | ಬಾಲಕಿಯರ ಪ್ರವರ್ಗ | | | | | | |
|---|---|---|---|---|---|---|---|---|---|---|---|---|---|---|---|
| | | ವ-1 | 2 ಎ | 2 ಬಿ | 3 ಎ | 3ಬಿ | ಪ. ಜಾ | ಪ.ವ | ವ-1 | 2ಎ | 2 ಬಿ | 3 ಎ | 3ಬಿ | ಪ. ಜಾ | ಪ.ವ |
| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 | 15 | 16 |
| | | | | | | | | | | | | | | | |
| | ಒಟ್ಟು | | | | | | | | | | | | | | |

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮೂಲಕ ಹೊಸ ಮೆಟ್ರಿಕ್-ನಂತರದ ವಿದ್ಯಾರ್ಥಿನಿಲಯವನ್ನು ಪ್ರಾರಂಭಿಸಲು ತಪಾಸಣಾ ವರದಿಯ ನಮೂನೆ

## ಅನುಬಂಧ-1(ಭಾಗ-1)

| | | |
|---|---|---|
| 1 | ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳ ಹೆಸರು ಮತ್ತು ತಪಾಸಣಾ ದಿನಾಂಕ | |
| 2 | ವಿದ್ಯಾರ್ಥಿನಿಲಯವನ್ನು ಪ್ರಾರಂಭಿಸಬೇಕಾದ ಸ್ಥಳದ ಹೆಸರು, ಜನಸಂಖ್ಯೆ ಮತ್ತು ತಾಲ್ಲೂಕು | |

<table>
<tr><td>3</td><td>ಪ್ರಾರಂಭಿಸಬೇಕಾದ ವಿದ್ಯಾರ್ಥಿನಿಲಯ ಬಾಲಕರಿಗಾಗಿಯೇ ಅಥವಾ ಬಾಲಕಿಯರಿಗಾಗಿಯೇ?</td><td colspan="8"></td></tr>
<tr><td>4</td><td>ನಿಲಯವನ್ನು ಪ್ರಾರಂಭಿಸಬೇಕಾದ ಸ್ಥಳದಲ್ಲಿ ನಡೆಯುತ್ತಿರುವ ಮೆಟ್ರಿಕ್-ನಂತರದ ಶಿಕ್ಷಣ ಸಂಸ್ಥೆಗಳ ಸಂಖ್ಯೆ (ಅನುಬಂಧ-2(1) ರಲ್ಲಿ ಇರುವಂತೆ)</td><td colspan="2">ಸಂಸ್ಥೆಗಳ ಸಂಖ್ಯೆ</td><td colspan="2">ಬಾಲಕರು</td><td colspan="2">ಬಾಲಕಿಯರು</td><td colspan="2">ಒಟ್ಟು</td></tr>
<tr><td></td><td>ಅ) ಪದವಿ ಕಾಲೇಜುಗಳು</td><td colspan="2"></td><td colspan="2"></td><td colspan="2"></td><td colspan="2"></td></tr>
<tr><td></td><td>ಆ) ಪದವಿ ಪೂರ್ವ ಕಾಲೇಜುಗಳು</td><td colspan="2"></td><td colspan="2"></td><td colspan="2"></td><td colspan="2"></td></tr>
<tr><td></td><td>ಇ) ಶಿಕ್ಷಣ ತರಬೇತಿ ಸಂಸ್ಥೆಗಳು</td><td colspan="2"></td><td colspan="2"></td><td colspan="2"></td><td colspan="2"></td></tr>
<tr><td></td><td>ಈ) ಕೈಗಾರಿಕೆ ತರಬೇತಿ ಸಂಸ್ಥೆಗಳು</td><td colspan="2"></td><td colspan="2"></td><td colspan="2"></td><td colspan="2"></td></tr>
<tr><td></td><td>ಉ) ತಾಂತ್ರಿಕ / ವೈದ್ಯಕೀಯ ಕಾಲೇಜುಗಳು</td><td colspan="2"></td><td colspan="2"></td><td colspan="2"></td><td colspan="2"></td></tr>
<tr><td></td><td>ಊ) ಐ.ಟಿ.ಐ / ಡಿಪ್ಲೊಮಾ ಶಿಕ್ಷಣ ಸಂಸ್ಥೆಗಳು</td><td colspan="2"></td><td colspan="2"></td><td colspan="2"></td><td colspan="2"></td></tr>
<tr><td></td><td>ಋ) ಇತರೆ ಶಿಕ್ಷಣ ಸಂಸ್ಥೆಗಳು (ವಿವರ ನಮೂದಿಸುವುದು)</td><td colspan="2"></td><td colspan="2"></td><td colspan="2"></td><td colspan="2"></td></tr>
<tr><td>5</td><td>ಪ್ರಸ್ತಾಪಿತ ವಿದ್ಯಾರ್ಥಿನಿಲಯವು ತಾಲ್ಲೂಕು ಕೇಂದ್ರದಿಂದ ಎಷ್ಟು ದೂರದಲ್ಲಿದೆ?</td><td colspan="8"></td></tr>
<tr><td>6</td><td>10 ಕಿ.ಮೀ ಅಂತರದಲ್ಲಿ ಈ ಗ್ರಾಮ ಸುತ್ತ ಮುತ್ತ ಯಾವುದೇ ಇಲಾಖೆಯ ಸರ್ಕಾರಿ / ಖಾಸಗಿ / ಅನುದಾನಿತ ವಿದ್ಯಾರ್ಥಿನಿಲಯಗಳು ನಡೆಯುತ್ತಿವೆಯೇ?</td><td colspan="8"></td></tr>
<tr><td>7</td><td>ನಡೆಯುತ್ತಿದ್ದಲ್ಲಿ, ಇಲಾಖೆಯ ಹೆಸರು, ಸಂಸ್ಥೆಯ ಹೆಸರು ಮತ್ತು ಮಂಜೂರಾತಿ ಸಂಖ್ಯೆ</td><td colspan="8"></td></tr>
<tr><td>8</td><td>5 ಕಿ.ಮೀ ಗಿಂತ ಹೆಚ್ಚಿನ ದೂರದ ಊರುಗಳಿಂದ ಬರುವ ವಿದ್ಯಾರ್ಥಿಗಳ ಒಟ್ಟು ಸಂಖ್ಯೆ (ಅನುಬಂಧ-2(2)(3) ರಲ್ಲಿರುವಂತೆ)</td><td>ಪ್ರ-1</td><td>2ಎ</td><td>2ಬಿ</td><td>3ಎ</td><td>3ಬಿ</td><td>ಎಸ್.ಸಿ</td><td>ಎಸ್.ಟಿ</td><td>ಒಟ್ಟು</td></tr>
</table>

..8

| | | | | | | | | | |
|---|---|---|---|---|---|---|---|---|---|
| | ಬಾಲಕರು | | | | | | | | |
| | ಬಾಲಕಿಯರು | | | | | | | | |
| 9 | ವಿದ್ಯಾಸಿರಿ ಸೌಲಭ್ಯ ಮಂಜೂರಾಗಿರುವ ವಿದ್ಯಾರ್ಥಿಗಳ ವಿವರ (ಅನುಬಂಧ-2(4)ರಲ್ಲಿರುವಂತೆ | | | | | | | | |
| 10 | 50 / 100 ಸಂಖ್ಯಾಬಲದ ವಿದ್ಯಾರ್ಥಿನಿಲಯವನ್ನು ಪ್ರಾರಂಭಿಸಲು ಅನುಕೂಲಕರವಾದ ಉಚಿತ/ಬಾಡಿಗೆ ಕಟ್ಟಡ ದೊರೆಯುತ್ತದೆಯೇ? | | | | | | | | |
| 11 | ವಿದ್ಯಾರ್ಥಿನಿಲಯದ ಪ್ರಾರಂಭಕ್ಕೆ ಮಂಜೂರಾತಿ ನೀಡಿದ್ದಲ್ಲಿ, ನಿಲಯದ ಕಟ್ಟಡ ನಿರ್ಮಾಣಕ್ಕೆ ಉಚಿತ ನಿವೇಶನ ಲಭ್ಯವಿದೆಯೇ? | | | | | | | | |
| 12 | ಲಭ್ಯವಿದ್ದಲ್ಲಿ, ನಿವೇಶನದ ವಿವರಗಳನ್ನು ನೀಡುವುದು (ಸರ್ವೆ ನಂ, ನಿವೇಶನದ ಅಳತೆ ಅಡಿಗಳು) | | | | | | | | |
| 13 | ವಿದ್ಯಾರ್ಥಿನಿಲಯದ ಪ್ರಾರಂಭಕ್ಕೆ ಸಂಬಂಧಿಸಿದ ಇತರೆ ಅಂಶಗಳೇನಾದರೂ ಇದ್ದಲ್ಲಿ, ವಿವರಣೆಗಳು | | | | | | | | |
| 14 | ಸದರಿ ಸ್ಥಳದಲ್ಲಿ ವಿದ್ಯಾರ್ಥಿನಿಲಯದ ಪ್ರಾರಂಭಕ್ಕೆ ತನಿಖಾಧಿಕಾರಿಯ ಅಭಿಪ್ರಾಯ | | | | | | | | |
| 15 | ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳ ಪರಿಶೀಲನೆಯಲ್ಲಿ ಕಂಡುಬಂದ ಅಂಶಗಳು | | | | | | | | |
| 16 | ಮಂಜೂರಾತಿಯ ಬಗ್ಗೆ ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳ ಸ್ಪಷ್ಟ ಅಭಿಪ್ರಾಯ | | | | | | | | |

ಸಹಿ:-

ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳು

----------------------ಜಿಲ್ಲೆ.

## ಭಾಗ-2

| | | |
|---|---|---|
| 16 | ಪ್ರಸ್ತಾವನೆ ಕುರಿತು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಯ ಅಭಿಪ್ರಾಯ | |

ಸಹಿ:-

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು

ಜಿಲ್ಲಾ ಪಂಚಾಯತ್,

------------------ಜಿಲ್ಲೆ.

## ಅನುಬಂಧ-2(1)

ವಿದ್ಯಾರ್ಥಿನಿಲಯವನ್ನು ಪ್ರಾರಂಭಿಸಲು ಪ್ರಸ್ತಾಪಿಸಿರುವ ಸ್ಥಳದಲ್ಲಿರುವ ಶಿಕ್ಷಣ ಸಂಸ್ಥೆಗಳ ಹೆಸರು ಮತ್ತು ವಿದ್ಯಾರ್ಥಿಗಳ ಸಂಖ್ಯಾಬಲ

| ಕ್ರ. ಸಂ. | ಶಿಕ್ಷಣ ಸಂಸ್ಥೆಯ ಹೆಸರು | ವ್ಯಾಸಂಗ ಮಾಡುವ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳ ಸಂಖ್ಯೆ | | |
|---|---|---|---|---|
| | | ಬಾಲಕರು | ಬಾಲಕಿಯರು | ಒಟ್ಟು |
| | | | | |

## ಅನುಬಂಧ-2 (2)

ಅನುಬಂಧ-2(1)ರ ಕಾಲಂ 3 ಮತ್ತು 4ರ ಪೈಕಿ ಕಾಲೇಜುಗಳಿಗೆ 5 ಕಿ.ಮೀ ದೂರದ ಊರುಗಳಿಂದ ಬರುವ ವಿದ್ಯಾರ್ಥಿಗಳ ವಿವರಗಳನ್ನು ಈ ನಮೂನೆಯಲ್ಲಿ ಒದಗಿಸುವುದು (ಶಿಕ್ಷಣ ಸಂಸ್ಥೆವಾರು ಪ್ರತ್ಯೇಕವಾಗಿ)

| ಕ್ರ ಸಂ | ವಿದ್ಯಾರ್ಥಿ ಹೆಸರು | ಖಾಯಂ ವಾಸ ಸ್ಥಳ | ಪೋಷಕರು | ವಾಸ ಸ್ಥಳಕ್ಕೂ ಮತ್ತು ವಿದ್ಯಾಸಂಸ್ಥೆಗೂ ಇರುವ ದೂರ | ಜಾತಿ | ಹಿಂದುಳಿದ / ಪ.ಜಾತಿ/ ಪ.ಪಂಗಡ | ತರಗತಿ | ಕುಟುಂಬದ ವಾರ್ಷಿಕ ಆದಾಯ |
|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 |
| | | | | | | | | |

## ಅನುಬಂಧ-2(3)

ಅನುಬಂಧ-2(2) ರಲ್ಲಿರುವ ವಿದ್ಯಾರ್ಥಿಗಳ ವಿವರಗಳು

| ಕ್ರ. ಸಂ. | ಶಿಕ್ಷಣ ಸಂಸ್ಥೆಯ ಹೆಸರು | ಬಾಲಕರ ಪ್ರವರ್ಗ | | | | | | | ಬಾಲಕಿಯರ ಪ್ರವರ್ಗ | | | | | | |
|---|---|---|---|---|---|---|---|---|---|---|---|---|---|---|---|
| | | ಪ್ರ-1 | 2ಎ | 2ಬಿ | 3ಎ | 3ಬಿ | ಪ.ಜಾ | ಪ.ಪ | ಪ್ರ-1 | 2ಎ | 2ಬಿ | 3ಎ | 3ಬಿ | ಪ.ಜಾ | ಪ.ಪ |
| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 | 15 | 16 |
| | | | | | | | | | | | | | | | |
| | ಒಟ್ಟು | | | | | | | | | | | | | | |

## ಅನುಬಂಧ-2(4)

ವಿದ್ಯಾಸಿರಿ ಸೌಲಭ್ಯ ಮಂಜೂರಾಗಿರುವ ವಿದ್ಯಾರ್ಥಿಗಳ ವಿವರ

| ಕ್ರ. ಸಂ. | ಶಿಕ್ಷಣ ಸಂಸ್ಥೆಯ ಹೆಸರು | ವಿದ್ಯಾರ್ಥಿಗಳ ವಿವರ | | |
|---|---|---|---|---|
| | | ಬಾಲಕ | ಬಾಲಕಿ | ಒಟ್ಟು |
| | | | | |

(ಆರ್.ಭಾಸ್ಕರ್)
ಸರ್ಕಾರದ ಅಧೀನ ಕಾರ್ಯದರ್ಶಿ-2
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ